ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರ ಸ್ಥಾಪನೆ

**44 (105) ಶ್ರೀ ರಾಜೀವ್ ಪಿ. (ಕುಡಚಿ) :–** ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :–

(ಅ) ಬೆಳಗಾವಿ ಜಿಲ್ಲೆ ರಾಯಭಾಗ ತಾಲ್ಲೂಕಿನಲ್ಲಿ ಬರುವ ಕುಡಚಿ ಮತ ಕ್ಷೇತ್ರದಲ್ಲಿ ಯಾವುದೇ ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ಕ್ಷೇತ್ರದ ವಿದ್ಯಾರ್ಥಿಗಳು ಸರ್ಕಾರಿ ಕೈಗಾರಿಕಾ ತರಬೇತಿಯನ್ನು ಪಡೆಯಲು ದೂರದ ಬೆಳಗಾವಿಗೆ ಹೋಗಬೇಕು ಎಂಬುದು ಗಮನಕ್ಕೆ ಬಂದಿದೆಯೇ ;

(ಇ) ಹಾಗಿದ್ದಲ್ಲಿ, ಹಾರೋಗೇರಿ ಗ್ರಾಮದಲ್ಲಿ ಒಂದು ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರವನ್ನು ಸ್ಥಾಪನೆ ಮಾಡುವ ಬದ್ಧತೆ ಸರ್ಕಾರಕ್ಕಿದೆಯೇ ;

(ಈ) ಹಾಗಿದ್ದಲ್ಲಿ, ಐಟಿಐ ಕೇಂದ್ರವನ್ನು ಯಾವ ವರ್ಷ ಸ್ಥಾಪನೆ ಮಾಡಲಾಗುವುದು ?

**ಶ್ರೀ ಪಿ.ಟಿ. ಪರಮೇಶ್ವರ ನಾಯಕ್ (ಮಾನ್ಯ ಕಾರ್ಮಿಕ ರಾಜ್ಯ ಸಚಿವರು) :–**

(ಅ) ಹೌದು.

(ಆ) ಹೌದು.

(ಇ) ಪ್ರಸ್ತುತ ಸರ್ಕಾರದ ಮುಂದೆ ಹಾರೋಗೇರಿ ಗ್ರಾಮದಲ್ಲಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯನ್ನು ಪ್ರಾರಂಭಿಸುವ ಪ್ರಸ್ತಾವನೆ ಇರುವುದಿಲ್ಲ.

(ಈ) ಸ್ಥಳೀಯ ಅಗತ್ಯತೆ, ಬೇಡಿಕೆ ಮತ್ತು ಅನುದಾನದ ಲಭ್ಯತೆ ಆಧರಿಸಿ ಕುಡಚಿ ಮತಕ್ಷೇತ್ರಕ್ಕೆ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯನ್ನು ಮುಂಬರುವ ವರ್ಷಗಳಲ್ಲಿ ಪ್ರಾರಂಭಿಸುವ ಬಗ್ಗೆ ಪರಿಶೀಲಿಸಲಾಗುವುದು.

ಮತ್ಸ್ಯ ಯೋಜನೆಯಲ್ಲಿ ವಸತಿ ಕಲ್ಪಿಸುವುದು

**45 (106) ಶ್ರೀ ರಾಜೀವ್ ಪಿ. (ಕುಡಚಿ) :–** ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :–

(ಅ) ಬೆಳಗಾವಿ ಜಿಲ್ಲೆ, ರಾಯಭಾಗ ತಾಲ್ಲೂಕಿನ ಕುಡಚಿ ಮತ ಕ್ಷೇತ್ರದಲ್ಲಿರುವ ಮೀನುಗಾರರಿಗೆ ಮತ್ಸ್ಯ ಯೋಜನೆಯಲ್ಲಿ ವಸತಿ ಕಲ್ಪಿಸಲು ಮನವಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಕುಡಚಿ ಪಟ್ಟಣದಲ್ಲಿ ವಸತಿ ರಹಿತ ಮೀನುಗಾರರು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) 2013–14ನೇ ಸಾಲಿನ ಮತ್ಸ್ಯ ವಸತಿ ಯೋಜನೆಯ ಆಯ್ಕೆಯಲ್ಲಿ ಕುಡಚಿ ಮತಕ್ಷೇತ್ರದ ಮೀನುಗಾರರ ಆಯ್ಕೆಯನ್ನು ಕೈಬಿಟ್ಟಿರುವುದೇಕೆ ;

(ಈ) ಇದಕ್ಕೆ ಕಾರಣವೇನು ; (ವಿವರ ನೀಡುವುದು)

(ಉ) ಈ ಮತಕ್ಷೇತ್ರಕ್ಕೆ 2014–15ನೇ ಸಾಲಿನಲ್ಲಿ ಸುಮಾರು 50 ಮನೆ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಊ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದ ಸೂಕ್ತ ಕ್ರಮವೇನು ?

**ಶ್ರೀ ಕೆ. ಅಭಯ ಚಂದ್ರ (ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು) :–**

(ಅ) ಹೌದು.

(ಆ) ಹೌದು.

(ಇ) ಮತ್ತು (ಈ) 2013–14ನೇ ಸಾಲಿನಲ್ಲಿ ಮತ್ಸ್ಯಾಶ್ರಯ ಯೋಜನೆಯಡಿ 1000 ಮನೆಗಳನ್ನು ಮಾತ್ರ ಹಂಚಿಕೆ ಮಾಡಿದ್ದು, ಸದರಿ ಸಾಲಿನಲ್ಲಿ ಬೇಡಿಕೆಯಿರುವ ಎಲ್ಲಾ ವಿಧಾನಸಭಾ ಕ್ಷೇತ್ರಗಳಿಗೆ ಹಂಚಿಕೆ ಮಾಡಿರುವುದಿಲ್ಲ.

(ಉ) ಪ್ರಸ್ತುತ ಕುಡಚಿ ವಿಧಾನಸಭಾ ಕ್ಷೇತ್ರಕ್ಕೆ 60 ಮನೆಗಳಿಗೆ ಬೇಡಿಕೆ ಬಂದಿದ್ದು, ಪರಿಶೀಲನೆ ಹಂತದಲ್ಲಿದೆ.

(ಊ) ಅನುದಾನ ಮತ್ತು ಮತ್ಸ್ಯಾಶ್ರಯ ಮನೆಗಳ ಲಭ್ಯತೆ ಹಾಗೂ ವಿಧಾನಸಭಾ ಕ್ಷೇತ್ರದ ಬೇಡಿಕೆಗೆ ತಕ್ಕಂತೆ ಪರಿಶೀಲಿಸಿ ಕ್ರಮವಹಿಸಲಾಗುವುದು.

**ಚಿರತೆಯ ದಾಳಿ**

**46 (107) ಶ್ರೀ ರಾಜೀವ್ ಪಿ. (ಕುಡಚಿ) :–** ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :–

(ಅ) ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕು ಗೆಜ್ಜಲಗೇರೆ ಗ್ರಾಮದಲ್ಲಿ ಚಿರತೆ ದಾಳಿಯಿಂದ ವ್ಯಕ್ತಿ ಮೃತಪಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ಮೃತಪಟ್ಟ ವ್ಯಕ್ತಿಗಳಿಗೆ ಸರ್ಕಾರವು ಎಷ್ಟು ಪರಿಹಾರ ನೀಡಿದೆ ;

(ಇ) ಕಾಡು ಪ್ರಾಣಿಗಳು ನಾಡಿಗೆ ಬರಲು ಕಾರಣವೇನು ;

(ಈ) ಕಾಡು ಪ್ರಾಣಿಗಳು ನಾಡಿಗೆ ಬರಲು ಕಾರಣವಾದ ಅರಣ್ಯಾಧಿಕಾರಿಗಳ ಮೇಲೆ ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ ; (ವಿವರ ನೀಡುವುದು)

(ಉ) ದಾಳಿ ಮಾಡಿದ ಚಿರತೆಯನ್ನು ಹಿಡಿಯಲು ಸರ್ಕಾರದ ಕ್ರಮವೇನು ?